ತಡೆಯುವುದರಲ್ಲೂ ಅರ್ಥವಿಲ್ಲ ಅನಿಸಿತು ವಿದ್ಯಾಗೆ. ಗಾಡಿ ಹಾಗೂ ಮನೆಯ ಕೀಲಿ ಹಿಡಿದು ಆತ ಹೊರಟಾಗ, 'ನೀನು ಗಾಡಿ ಓಡಿಸಬೇಡ, ಸಾತ್ವಿಕ್‌ನಿಗೆ ಕೊಡು' ಎಂದ ವಿದ್ಯಾಳ ಕಳಕಳಿಯ ಮಾತುಗಳೂ ಅವನ ಕಿವಿ ತಲುಪಲಿಲ್ಲ.

ಅವನು ಮರಳಿ ಬಂದಿದ್ದು ರಾತ್ರಿ ಒಂದೂವರೆಗೆ. ತನಗೆ ಎಚ್ಚರವಾಗದಿರಲೆಂದು ಮೆಲ್ಲನೆ ಬಾಗಿಲು ತೆಗೆದ ಶುಭಂಕರ್‌ನ ಬರವು ಆಕೆಗೆ ತಿಳಿದಿತ್ತಾದರೂ ಅಲುಗಾಡದೆ ಸುಮ್ಮನಿದ್ದಳು. ಆತ ತನ್ನ ಪಕ್ಕದಲ್ಲಿ ಬಂದು ಮಲಗಿದ್ದೂ ಕೂಡ ಆಕೆಗೆ ಗೊತ್ತು. ಸದ್ಯದ ಪರಿಸ್ಥಿಯಲ್ಲಿ ಮಾತಾಡಿದರೆ ಎಲ್ಲಿ ಅತ್ತುಬಿಟ್ಟಾನೋ ಅನ್ನುವ ಹೆದರಿಕೆಯಿಂದ ರಾತ್ರಿಯಿಡೀ ಮಗ್ಗಲು ಬದಲಿಸುತ್ತಿದ್ದ ಶುಭಂಕರನೊಡನೆ ಒಂದಕ್ಷರವನ್ನೂ ಮಾತಾಡದೆ, ಅಲುಗಾಡದೆ ಸುಮ್ಮನೆ ಮಲಗಿದಳು. ಬೆಳಿಗ್ಗೆ ಅವನ ಬಾಯಿಯಿಂದಲೇ ಮೀತಾ ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿರುವುದು ವಿದ್ಯಾಗೆ ತಿಳಿಯಿತು.

'ಅವಳಿಗೇನು ಹೆಚ್ಚು ವಯಸ್ಸಾಗಿಲ್ಲ, ಅಬ್ಬಬ್ಬ ಅಂದರೆ ಐವತ್ತಿರಬಹುದು. ಈ ರೀತಿ ತಲೆ ಕೆಡಿಸಿಕೊಂಡರೆ ಹೇಗೆ? ಒಂದು ಪಕ್ಷ ಅವಳಿಗೇನಾದರೂ ಹೆಚ್ಚು ಕಮ್ಮಿಯಾದರೆ ಅಭಿಮಾನಿಗಳಿಗೆ ಅವಳ ಕ್ಯಾಸೆಟ್‌ಗಳಿವೆ, ಸಿಡಿಗಳಿವೆ, ಎಷ್ಟೆಲ್ಲ ಕಡೆಗಳಲ್ಲಾದ ಅವಳ ಕಾರ್ಯಕ್ರಮದ ವಿಡಿಯೊಗಳಿವೆ. ಒಂದರ್ಥದಲ್ಲಿ ಕಲಾವಿದ ಯಾವತ್ತೂ ಸಾಯುವುದಿಲ್ಲ. ಶುಭಂಕರ್, ಕಲಾವಿದರ ಕಲೆಯನ್ನು ಜೋಪಾನ ಮಾಡಲು ವಿಜ್ಞಾನಿಗಳು ಎಷ್ಟೆಲ್ಲ ಪ್ರಯತ್ನಿಸಿದ್ದಾರೆ. ಮುಂಬರುವ ಎಷ್ಟೋ ಪೀಳಿಗೆಗಳು ಆಕೆಯ ಹಾಡುಗಳನ್ನು ಕೇಳುತ್ತಿರಬಹುದು' ಎಂದು ಪರಿಪರಿಯಾಗಿ ತಿಳಿ ಹೇಳಲು ಪ್ರಯತ್ನಿಸಿದಳು.

ಆದರೆ, ಇನ್ನು ಮುಂದೆ ಆಕೆ ಹೊಸ ಹಾಡುಗಳನ್ನು ಹಾಡಲಾರಳು ಅನ್ನುವುದೇ ಅವನಿಗಿದ್ದ ಕೊರಗು.

'ನಿಜ, ಈಗ ನೋಡಿ ಬಾಲಗಂಧರ್ವ ಹಾಗೂ ಸೈಗಲ್‌ನಂತಹ ಕಲಾವಿದರ ಹಾಡುಗಳನ್ನು ಅಷ್ಟೊಂದು ಹೆಚ್ಚು ಪ್ರಮಾಣದಲ್ಲಿ ಶೇಖರಿಸಿಡಲಾಗಲಿಲ್ಲ. ಆದರೆ ಐವತ್ತು ವರ್ಷಗಳ ನಂತರ ಹುಟ್ಟಿದ್ದಕ್ಕಾಗಿ ಮೀತಾ ತನ್ನ ಹಾಡುಗಳನ್ನು ಮುಂದಿನ ಹಲವು ಪೀಳಿಗೆಗಳಿಗಾಗಿ ಬಿಟ್ಟು ಹೋಗುತ್ತಿದ್ದಾಳೆ. ಇನ್ನೂ ನೂರು ವರ್ಷದ ನಂತರ ಬಹುಶಃ ವಿಜ್ಞಾನ ಸಾಕಷ್ಟು ಮುಂದುವರೆದು ಗಾಯಕನ ಸ್ವರಯಂತ್ರ ಜೋಪಾನ ಮಾಡಿಡುವಂತಹ ತಂತ್ರಜ್ಞಾನವೂ ವಿಕಸಿತವಾಗ ಬಹುದೇನೋ. ಆಗ ನಿಮ್ಮಂತಹ ರಸಿಕರು ತಮ್ಮಿಷ್ಟದ ಕಲಾವಿದನ ಹಾಡುಗಳನ್ನು ಮನಸಾರೆ ಕೇಳಬಹುದು. ಇಂತಹ ಕಲಾವಿದರು ಹೊಸ ಹೊಸ ಪೀಳಿಗೆಗಳಲ್ಲಿ ಹುಟ್ಟಿ ಬರುತ್ತಲೇ ಇರುತ್ತಾರೆ. ಮೀತಾಳಂತಹ ಶ್ರೇಷ್ಠ ಹಾಡುಗಾರರು ಎಲ್ಲಾದರೂ ತಯಾರಾಗುತ್ತಿರಬಹುದು. ಇನ್ನು ಐವತ್ತು ವರ್ಷಗಳ ನಂತರ ಅವರಿಗಿಂತಲೂ ಒಳ್ಳೆಯ ಗಾಯಕಿಯರು ಹುಟ್ಟಿ ಇನ್ನೂ ಒಳ್ಳೆಯದಾಗಿ ಹಾಡಬಹುದು' ಅಂದಳು. ವಿದ್ಯಾಳ ಉದ್ದೇಶ ಒಳ್ಳೆಯದೇ ಆಗಿತ್ತು. ಅವನಿಗಾಗಿರುವ ಆಘಾತ ಕಡಿಮೆಯಾಗಿ, ಮನಸ್ಸಿನ ಭಾರ ಇಳಿಯಬೇಕೆನ್ನುವುದಷ್ಟೇ ಅವಳ ಉದ್ದೇಶ. ಆದರೆ, ತನ್ನ ಮಾತಿನಿಂದ ಅವನ ಕಣ್ಣುಗಳು ಹೊಳೆದದ್ದು ಅವಳಿಗೆ ತಿಳಿಯಲೇ ಇಲ್ಲ. ಅವನ ಮಿದುಳು ಬೇರೆಯೇ ಯೋಚಿಸುತ್ತಿದೆ ಅನ್ನುವುದು ಅವನಿಗಷ್ಟೇ ಗೊತ್ತಿತ್ತು. ಶುಭಂಕರ್ ಉತ್ಸಾಹದಿಂದ ಮತ್ತೊಂದು ಕಪ್ ಚಹಾ ಬೇಕೆಂದ. ಮನಸ್ಸು ಸಂತಸದಲ್ಲಿದ್ದಾಗ ಮಾತ್ರ ಅವನು ಹೆಚ್ಚಿಗೆ ಚಹಾ ಕೇಳುತ್ತಿದ್ದ ಅನ್ನುವುದು ಗೊತ್ತಿದ್ದ ವಿದ್ಯಾ ತನ್ನ ಮಾತಿನಿಂದ ಅವನ ಮನಸ್ಸು ಸ್ವಲ್ಪ ಹಗುರಾಗಿರಬೇಕು ಅಂದುಕೊಂಡಳು. ಅವನಿಗಾಗಿ ಚಹಾ ತರಲು ಒಳಗೆ ಹೋಗಿದ್ದೇ ತಡ